ಅ) ಘಟಪ್ರಭಾ ಎಡದಂಡೆ ಕಾಲುವೆ ಲೈನಿಂಗ್ ಆದ ಮೇಲೆ ನೀರಾವರಿ ಆಗುವ ಕ್ಷೇತ್ರ ೧,೬೧,೮೭೧ ಹೆಕ್ಟೇರುಗಳು.

ಇ) ೧) ೧೯೮೪-೮೫ರ ದರಗಳ ಪಟ್ಟಿಗಳ ಅನುಗುಣವಾಗಿ ಕಾಲುವೆಗೆ ಲೈನಿಂಗ್ ಮಾಡಲು ಪರಿಷ್ಕೃತ ಅಂದಾಜು ವೆಚ್ಚ ೩೫.೭೮ ಕೋಟಿ ರೂಪಾಯಿಗಳು.

೨) ಈಗಾಗಲೇ ಆಗಿರುವ ವೆಚ್ಚ ೧೦.೩೧ ಕೋಟಿ ರೂಪಾಯಿಗಳು.

ಈ) ೧೯೮೫-೮೬ನೇ ಸಾಲಿಗೆ ೨೫೫ ಐ.ಎನ್.ಇ.ಡಿ. ಪಂಪ್ಸು ಎಫ್.ಸಿ. ಇದರ ಅಡಿಯಲ್ಲಿ ಕಾಲುವೆ ಮತ್ತು ಉಪ ಕಾಲುವೆಗೆ ವೆಚ್ಚವಾದ ಹಣ ಜನವರಿ ೮೬ರವರೆಗೆ ೧೦೧.೮೨ ಲಕ್ಷ ರೂಪಾಯಿಗಳು.

ಪುತ್ತೂರಿನಲ್ಲಿ ಅಂಗನವಾಡಿಗಳನ್ನು ತೆರೆಯುವ ಬಗ್ಗೆ

೧೧೭೨ ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪುತ್ತೂರು ತಾಲ್ಲೂಕು ಹಿಂದುಳಿದ ಪ್ರದೇಶ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಜಿಲ್ಲೆಯಲ್ಲಿ ಅಂಗನವಾಡಿಗಳನ್ನು ಪ್ರಾರಂಭಿಸುವ ಸಂದರ್ಭದಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ಪ್ರಾರಂಭಿಸದೆ ಇರುವುದಕ್ಕೆ ಕಾರಣವೇನು ?

ಇ) ಕಳೆದ ಬಾರಿ ಸದನದಲ್ಲಿ ಈ ಪ್ರಶ್ನೆಯನ್ನು ಕೇಳಲಾಗಿದ್ದು ೧೯೮೬ನೇ ಸಾಲಿಗೆ ಪುತ್ತೂರು ತಾಲ್ಲೂಕಿನಲ್ಲಿ ಪ್ರಾರಂಭಿಸುವ ನಿಟ್ಟಿನಲ್ಲಿ ಭರವಸೆಯನ್ನು ಕೊಟ್ಟಿದ್ದು ಅದು ಇವರೆಗೂ ಈಡೇರದೆ ಇರಲು ಕಾರಣವೇನು? ಈ ೧೯೮೬ ರಲ್ಲಿ ಅದನ್ನು ಪ್ರಾರಂಭಿಸಲಾಗುವುದೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಹೌದು.

ಆ) ಸಮಗ್ರ ಬಾಲವಿಕಾಸ ಯೋಜನೆಯು ಪುತ್ತೂರು ತಾಲ್ಲೂಕಿಗೆ ಮಂಜೂರಾಗದೆ ಇರುವುದರಿಂದ ಅಂಗನವಾಡಿಗಳನ್ನು ಪ್ರಾರಂಭಿಸಲು ಆಗಲಿಲ್ಲ. ಸಮಗ್ರ ಬಾಲವಿಕಾಸ ಯೋಜನಾ ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಮಂಜೂರು ಮಾಡಲಾಗುತ್ತಿದೆ. ಮೀಸಲು ಕ್ಷೇತ್ರ ಮತ್ತು ಬರ ಪೀಡಿತ ಪ್ರದೇಶಗಳಿಗೆ ಆದ್ಯತೆ ಕೊಡಲಾಗುತ್ತಿದೆ.

ಇ) ೨೫೫ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ತಾಲ್ಲೂಕಿಗೆ ವಿಸ್ತರಿಸಲು ಯೋಜಿಸಲಾಗಿದೆ.

ಭದ್ರಾ ಮೇಲ್ದಂಡೆ ಯೋಜನೆಯಿಂದ ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳಿಗೆ ನೀರಾವರಿ

೧೧೪೫ (ಬಿ) ಶ್ರೀ ಆರ್. ರಾಮಯ್ಯ (ಹಿರಿಯೂರು).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಭದ್ರಾ ಮೇಲ್ದಂಡೆ ಯೋಜನೆಯನ್ನು ಚಿತ್ರದುರ್ಗ ಹಾಗೂ ತುಮಕೂರು ಜಿಲ್ಲೆಗಳ ಜನತೆ ಕಾರ್ಯಗತ ಮಾಡಲು ಆಗ್ರಹ ಪಡಿಸಿರುವರೆ ?

ಆ) ಹಾಗಿದ್ದಲ್ಲಿ ಈ ಯೋಜನೆ ಎರಡು ಜಿಲ್ಲೆಗಳ ಯಾವ ಯಾವ ತಾಲ್ಲೂಕುಗಳಲ್ಲಿ ಹರಿಯುವುದು ಮತ್ತು ನಿರೂಪಿಸುವ ಒಟ್ಟು ವಿಸ್ತೀರ್ಣವೆಷ್ಟು ?

ಇ) ಇದರ ಸಮಗ್ರ ಯೋಜನೆ ಗಾತ್ರವನ್ನು ನೀರಾವರಿ ಸಮಿತಿಯಿಂದ ಸಿದ್ಧಪಡಿಸಲಾಗಿದೆಯೇ?

ಈ) ಪ್ರಸ್ತುತ ವರ್ಷದಿಂದಲೇ ಇದರ ಕಾರ್ಯಾಚರಣೆ ಪ್ರಾರಂಭವಾಗುವುದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಹೌದು

ಅ) ಈ ಯೋಜನೆಯು ಇನ್ನೂ ಆನ್ವೇಷಣಾ ಹಂತದಲ್ಲಿದೆ.

ಇ) ಈ ಯೋಜನೆಯ ಗಾತ್ರವು ತಾಂತ್ರಿಕ ಸಮಿತಿಯ ಪರಿಶೀಲನೆಯಲ್ಲಿದೆ.

ಈ) ಯೋಜನಾ ತನಿಖೆ ಪೂರ್ಣಗೊಂಡ ನಂತರ ಯೋಜನಾ ಪರದಿಯನ್ನು ಕೇಂದ್ರ ಸರ್ಕಾರದ ಸಹಪಂತಿಗೆ ಕಳುಹಿಸಲಾಗುವುದು. ಸಹಪಂತಿ ಬಂದ ನಂತರ ರಾಜ್ಯದ ಸಂಪನ್ಮೂಲಗಳನ್ನು ಅವಲಂಬಿಸಿ ಈ ಯೋಜನೆಯ ಕಾರ್ಯ ತೆಗೆದುಕೊಳ್ಳಲಾಗುವುದು.

ಬಂಟಪಾಳದ ಸರಪಾಡಿ ಅಣೆಕಟ್ಟು ನಿರ್ಮಾಣ ಯೋಜನೆ ಬಗ್ಗೆ

೧೬೫೦ ಶ್ರೀ ರಾಮನಾಥ ರೈ (ಬಂಟ್ವಾಳ) — ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಂಟ್ವಾಳದ ಸರಪಾಡಿ ಅಣೆಕಟ್ಟು ನಿರ್ಮಾಣ ಯೋಜನೆಯನ್ನು ಸರ್ಕಾರವು ಕಾರ್ಯರೂಪಕ್ಕೆ ತರಲಿವುದೆ ಅಥವಾ ಕೈ ಬಿಡಲಾಗುವುದೇ ?

ಆ) ಕಾರ್ಯರೂಪಕ್ಕೆ ತರುವುದಾದಲ್ಲಿ, ಪ್ರಸಕ್ತ ಪಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಿಕೊಳ್ಳಲಾಗುವುದೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಮತ್ತು

ಆ) ಈ ಯೋಜನೆಯೂ ಇನ್ನೂ ಆನ್ವೇಷಣಾ ಹಂತದಲ್ಲಿದೆ.

ಜೈನ ಸಮಾಜದ ಜನರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುವ ಬಗ್ಗೆ

೧೬೦೭ ಶ್ರೀ ಕೆ. ಪಿ. ಮಾಗೆಣ್ಣವರ್ (ಸದಲಗಾ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಜೈನ ಸಮಾಜದ ಜನರನ್ನು ಅಲ್ಪಸಂಖ್ಯಾತರೆಂದು ಪರಿಗಣಿಸುವ ವಿಚಾರ ಸರ್ಕಾರದವರ ಮುಂದಿದೆಯೇ ?

ಆ) ಹಾಗಿದ್ದಲ್ಲಿ ಬೇರೆ ಅಲ್ಪಸಂಖ್ಯಾತರಿಗೆ ಕೊಟ್ಟಿರುವ ಸವಲತ್ತುಗಳನ್ನು ಇವರಿಗೂ ಕೊಡಲಾಗುತ್ತಿದೆಯೇ ?

ಇ) ಕೊಟ್ಟಿರುವುದಾದರೆ ಅವು ಯಾವುವು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಇಲ್ಲ.

ಆ) ಮತ್ತು

ಇ) ಉದ್ಭವಿಸುವುದಿಲ್ಲ.

ಹಿಂದಂಳಿದ ಬುಡಕಟ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಹೆಚ್ಚಿಸುವ ಬಗ್ಗೆ

೧೬೫೫(ಬಿ) ಶ್ರೀ ಎಂ. ಎಲ್. ಮುತ್ತಣ್ಣವರ್ (ಗೋಕಾಕ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ಮತ್ತು ಕಾಲೇಜುಗಳಲ್ಲಿ ಹಿಂದುಳಿದ ಬುಡಕಟ್ಟು ವಿದ್ಯಾರ್ಥಿಗಳಿಗೆ ನೀಡುತ್ತಿರುವ ವಿದ್ಯಾರ್ಥಿ ವೇತನ ನೀಡುತ್ತಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಸದರಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡುವಾಗ ಅನುಸರಿಸುವ ನಿಯಮಗಳೇನು ?